1 143

ನ್ ಸೇನಾಪತಿ, ಭಾ.ಆ.ಸೇ.
ರದ ಪ್ರಧಾನ ಕಾರ್ಯದರ್ಶಿ
ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ)

TAPAN SENAPATI, I.A.S.
PRINCIPAL SECRETARY TO GOVT.
DEPT. OF PERSONNEL AND
ADMINISTRATIVE REFORMS
(JANASPANDANA)

(TEL. No.) ದೂರವಾಣಿ : ಕಛೇರಿ : 22860120
22033188
(R) ನಿವಾಸ : 66530945
ಕರ್ನಾಟಕ ಸರ್ಕಾರದ ಸಚಿವಾಲಯ
20ನೇ ಮಹಡಿ, ವಿ.ವಿ. ದೊಡ್ಡ ಗೋಪುರ
ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು – 560 001
KARNATAKA GOVT. SECRETARIAT
20TH FLOOR, V.V. MAIN TOWER
Dr. AMBEDKAR VEEDHI
BANGALORE - 560 001

ಅ.ಸ.ಪತ್ರ ಸಂಖ್ಯೆ: ಸಿಆಸುಇ:116:ಆರ್ ಟಿಐ: 2009

7ನೇ ಜುಲೈ 2010

ಮಾನ್ಯರೆ,

ಮಾಹಿತಿ ಹಕ್ಕು ಅಧಿನಿಯಮ 2005 ರ ಪ್ರಕರಣ 19ರಡಿ ಇಲಾಖೆಗಳ ಮೊದಲ ಮೇಲ್ಮನವಿ ಪ್ರಾಧಿಕಾರಗಳು ಅರ್ಜಿದಾರರ ಮೇಲ್ಮನವಿಗಳನ್ನು ನಿಗದಿತ ಅವಧಿಯೊಳಗೆ ವಿಚಾರಣೆ ನಡೆಸಿ ವಿಲೇಗೊಳಿಸಬೇಕಾಗುತ್ತದೆ. ಈ ಬಗ್ಗೆ ಮುಖ್ಯ ಕಾರ್ಯದರ್ಶಿಗಳು, ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ/ಕಾರ್ಯದರ್ಶಿಗಳಿಗೆ ಬರೆದ ದಿನಾಂಕ: 05.12.2009 ರ ಪತ್ರದಲ್ಲಿ ಸೂಚನೆಗಳನ್ನು ನೀಡಿರುತ್ತಾರೆ. ಅದಾಗ್ಯೂ ಕೆಲವು ಮೊದಲ ಮೇಲ್ಮನವಿ ಪ್ರಾಧಿಕಾರಗಳು ಸಕ್ರಿಯವಾಗಿ ಕಾರ್ಯನಿರ್ವಹಿಸದೆ ಇರುವುದು ಕಂಡುಬಂದಿದೆ. ಇದರ ಪರಿಣಾಮವಾಗಿ ಕರ್ನಾಟಕ ಮಾಹಿತಿ ಆಯೋಗದಲ್ಲಿ ದೂರು / ಅಪೀಲುಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ.

ಆದಕಾರಣ ಮೊದಲ ಮೇಲ್ಮನವಿ ಪ್ರಾಧಿಕಾರಗಳು ಮಾಹಿತಿ ಹಕ್ಕು ಅಧಿನಿಯಮ 2005 ರಡಿ ಒದಗಿಸಿರುವ ಅವಕಾಶಗಳನ್ವಯ ಕಾರ್ಯನಿರ್ವಹಿಸಿ ಮೇಲ್ಮನವಿಗಳನ್ನು ತ್ವರಿತವಾಗಿ ವಿಚಾರಣೆ ನಡೆಸಿ ವಿಲೇಗೊಳಿಸುವಂತೆ ಸಚಿವಾಲಯದ ಎಲ್ಲಾ ಇಲಾಖೆಗಳು ತಮ್ಮ ಅಧೀನದಲ್ಲಿ ಬರುವ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳಿಗೆ ಸೂಚಿಸುವಂತೆ ಕೋರುತ್ತೇನೆ.

ಆದರಗಳೊಂದಿಗೆ,

ತಮ್ಮ ವಿಶ್ವಾಸಿ,

TSenapati